ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಇ-ಆಡಳಿತ ವರ್ಗಾವಣೆ ತಂತ್ರಾಂಶ 01 /2012-13 ದಿನಾಂಕ:10-06-2014

**ಸಭಾ ಸೂಚನಾ ಪತ್ರ**

ವಿಷಯ: 2014-15ನೇ ಸಾಲಿನ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಆನ್‌ಲೈನ್ ತಂತ್ರಾಂಶ ಹಾಗೂ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು ಪ್ರಶ್ನೆಗಳಿಗೆ ಉತ್ತರಿಸುವ ಬಗ್ಗೆ ಅಭಿವೃದ್ಧಿ ಪಡಿಸಿರುವ ತಂತ್ರಾಂಶ ಉಪಯೋಗಿಸುವ ಬಗ್ಗೆ.

ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ವಿಭಾಗೀಯ ಮಟ್ಟದ ಪ್ರೋಗ್ರಾಮರ್‌ಗಳಿಗೆ ಹಾಗೂ ಜಿಲ್ಲಾ ವರ್ಗಾವಣಾ ನೋಡಲ್ ಅಧಿಕಾರಿಗಳ ಸಭೆಯನ್ನು ದಿನಾಂಕ: 17-06-2014 ರಂದು ಬೆಳಿಗ್ಗೆ 10.00 ರಿಂದ 5.00 ರವರೆಗೆ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, 3 ನೇ ಮಹಡಿ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ.

ಸದರಿ ಸಭೆಯಲ್ಲಿ ವರ್ಗಾವಣೆ ತಂತ್ರಾಂಶದಲ್ಲಿ ಇತ್ತೀಚೆಗೆ ಮಾಡಿರುವ ಮಾರ್ಪಾಡುಗಳ ಬಗ್ಗೆ ಹಾಗೂ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು ಪ್ರಶ್ನೆಗಳಿಗೆ ಉತ್ತರಿಸುವ ಬಗ್ಗೆ ಅಭಿವೃದ್ಧಿಪಡಿಸಿರುವ ತಂತ್ರಾಂಶ ಉಪಯೋಗಿಸುವ ಬಗ್ಗೆ ಕಾರ್ಯಗಾರವನ್ನು ಆಯೋಜಿಸಿದ್ದು, ಸದರಿ ಕಾರ್ಯಗಾರಕ್ಕೆ ಜಿಲ್ಲಾ ಕಛೇರಿಗಳಲ್ಲಿನ ತಂತ್ರಾಂಶಗಳ ಅರಿವು ಇರುವ ನೋಡಲ್ ಅಧಿಕಾರಿಯನ್ನು ಹಾಗೂ ಒಬ್ಬ ಜಿಲ್ಲಾ ಪ್ರೋಗ್ರಾಮರ್‌ನ್ನು ನಿಯೋಜಿಸಿವುದು. ಪ್ರೋಗ್ರಾಮರ್‌ಗಳಿಗೆ ನಿಯಮಾನುಸಾರ ನೀಡುವ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನು ಆಯಾ ಜಿಲ್ಲಾ ಕಛೇರಿಗಳಿಂದ ಭರಿಸಲು ಈ ಮೂಲಕ ಸೂಚಿಸಿದೆ.

ಅಪರ ಆಯುಕ್ತರು (ಆಡಳಿತ)
**ಹಾಗೂ ನೋಡಲ್ ಅಧಿಕಾರಿಗಳು ಇ-ಆಡಳಿತ**

**ಇವರಿಗೆ,**

1. **ರಾಜ್ಯ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.**
2. **ರಾಜ್ಯದ ಎಲ್ಲಾ ಜಿಲ್ಲಾ ವರ್ಗಾವಣಾ ನೋಡಲ್ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.**

ಪ್ರತಿಯನ್ನು

1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿತ್ತಾ ತಮ್ಮ ಕಛೇರಿಯ ನೋಡಲ್ ಅಧಿಕಾರಿಗಳನ್ನು ಸದರಿ ಕಾರ್ಯಗಾರಕ್ಕೆ ನಿಯೋಜಿಸಲು ಕೋರಿದೆ.
4. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ದಾರವಾಡ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿತ್ತಾ ತಮ್ಮ ಕಛೇರಿಯ ನೋಡಲ್ ಅಧಿಕಾರಿಗಳನ್ನು ಸದರಿ ಕಾರ್ಯಗಾರಕ್ಕೆ ನಿಯೋಜಿಸಲು ಕೋರಿದೆ.
5. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), (ಪ್ರೌಢ ಶಿಕ್ಷಣ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
6. **ಸಹ ನಿರ್ದೇಶಕರು (ಆಡಳಿತ) ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗುವ ಅಧಿಕಾರಿಗಳು/ಪ್ರೋಗ್ರಾಮರ್ ಗಳಿಗೆ (ಅಂದಾಜು 75 ಜನಕ್ಕೆ) ಕಾಫಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲು ಕೋರಿದೆ.**
7. ಶ್ರೀ. ಶಿವಕುಮಾರ್ ಪ್ರೋಗ್ರಾಮರ್ ಇ-ಆಡಳಿತ ಘಟಕ ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
8. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ಜಿಲ್ಲಾ ವಲಯ-1 ಹಾಗೂ ವಲಯ -3 ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.